ಪ್ರ ಕ ಟ ನೆ.

ಕಿವಮೊಗ್ಗ ಡಿಸ್ಟ್ರಿಕ್ಟು, ಕಿವಮೊಗ್ಗ-ಹೊನ್ನಾಳಿ ತಾಲ್ಲೂಕು ಹರ್ಲಗಟ್ಟ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ 1907ನೆ ಇಸವಿ ಸೆಪ್ಟಂಬರು 5ನೆ ತಾರೀಖಿನ ಗೆಜೆಟ್ಟಿನ ಕನ್ನಡ 2ನೆ ಭಾಗದ 426-427ನೆ ಪೇಜುಗಳಲ್ಲಿ ವಿವರಿಸಿರುತ್ತೆ.

ಕಡೂರು ಡಿಸ್ಟ್ರಿಕ್ಟು ಎಡೆಹಳ್ಳಿ ಸಬ್ ತಾಲ್ಲೂಕು ಮತ್ತು ಚಿಕ್ಕಮಗಳೂರು ತಾಲ್ಲೂಕಿನಲ್ಲಿರುವ ದೇವದಾನ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ 1907ನೆ ಇಸವಿ ಸೆಪ್ಟಂಬರು 5ನೆ ತಾರೀಖಿನ ಗೆಜೆಟ್ಟಿನ ಕನ್ನಡ 2ನೆ ಭಾಗದ 428-429ನೆ ಪೇಜುಗಳಲ್ಲಿ ವಿವರಿಸಿರುತ್ತೆ.

ಎಂ. ರಾಮರಾವ್,
ಮೈಸೂರು ಸೀಮೆಯ ಫಾರೆಸ್ಟ್ ಸೆಟಲ್‌ಮೆಂಟ್ ಅಫಿಸರ್.

ವಿದ್ಯಾಭ್ಯಾಸದ ಇಲಾಖಾ.

ಮೈಸೂರು ದೇಶೀಯ ಪರೀಕ್ಷೆಗಳು.

ಡಿ. ನಂಬರು 8ನೆಯ ಪ್ರಕಟನ ಪತ್ರಿಕೆ, ಸ್ರ 1907ನೆ ಇಸವಿ ಸೆಪ್ಟಂಬರು ತಾರೀಖು 6.

1. ಲೋವರ್ ಸೆಕಂಡರೀ ಪರೀಕ್ಷೆಯು ಸ್ರ 1907ನೆಯ ಇಸವಿ ನವೆಂಬರ್ ತಿಂಗಳು ಸೋಮವಾರ 18ನೆಯು ತಾರೀಖಿನಿಂದ ಆರಂಭವಾಗಿ, ಪ್ರತಿ ಡಿಸ್ಟ್ರಿಕ್ಟಿನ ಮುಖ್ಯಸ್ಥಳ (Head-quarters) ದಲ್ಲಿಯೂ, ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಟಣದಲ್ಲಿಯೂ ನಡೆಯಿಸಲ್ಪಡುವುದು.

2. ದೇಶಭಾಷೆಯ ಅಪ್ಪರ್ ಸೆಕಂಡರೀ ಪರೀಕ್ಷೆಯು ಸ್ರ 1907ನೆಯ ಇಸವಿ ನವೆಂಬರ್ ತಿಂಗಳು ಬುಧವಾರ 20ನೆಯ ತಾರೀಖಿನಿಂದ ಆರಂಭವಾಗಿ ಮೇಲೆ ನಮೂದಿಸಲ್ಪಟ್ಟಿರುವ ಎಲ್ಲಾ ಸ್ಥಳಗಳಲ್ಲಿಯೂ ನಡೆಯಿಸಲ್ಪಡುವುದು.

3. ಕರ್ನಾಟಕ ಪಂಡಿತಪರೀಕ್ಷೆಯು ಸ್ರ 1907ನೆಯ ಇಸವಿ ನವೆಂಬರ್ ತಿಂಗಳು ಸೋಮವಾರ 18ನೆಯ ತಾರೀಖಿನಿಂದ ಆರಂಭವಾಗಿ ಮೈಸೂರಲ್ಲಿ ನಡೆಯಿಸಲ್ಪಡುವುದು.

4. ಉಪಾಧ್ಯಾಯ ನಿರ್ಣಯ ಪತ್ರಿಕೆಗಳ ಅಪ್ಪರ್ ಸೆಕಂಡರಿ ಮತ್ತು ಲೋವರ್ ಸೆಕಂಡರಿ ಅಂತಸ್ತುಗಳ ಬರಹ ಪರೀಕ್ಷೆಯು (Written Examination) ಸ್ರ 1907ನೆಯ ಇಸವಿ ನವೆಂಬರ್ ತಿಂಗಳು ಶುಕ್ರವಾರ 1ನೆಯ ತಾರೀಖಿನಿಂದ ಆರಂಭವಾಗಿ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಡೆಯಿಸಲ್ಪಡುವುದು; ಮತ್ತು ಪ್ರೈಮರಿ ಅಂತಸ್ತಿನ ಬರಹ ಪರೀಕ್ಷೆಯು ಸ್ರ 1907ನೆಯ ಇಸವಿ ನವೆಂಬರ್ ತಿಂಗಳ ತಾರೀಖು 23ನೆಯ ಶನಿವಾರದ ದಿನದಲ್ಲಿ ಪ್ರತಿ ಡಿಸ್ಟ್ರಿಕ್ಟಿನ ಮುಖ್ಯ ಸ್ಥಳದಲ್ಲಿಯೂ, ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಟಣದಲ್ಲಿಯೂ ನಡೆಯಿಸಲ್ಪಡುವುದು.

5. ಪರೀಕ್ಷೆಯು ಇದರಡೀ ಕಂಡ ಕಾಲ ಮತ್ತು ವಿಷಯಗಳ ಕ್ರಮಗಳನ್ನನುಸರಿಸಿ ನಡೆಯಿಸಲ್ಪಡುವವು:—

ಮೈಸೂರು ಲೋಅರ್ ಸೆಕಂಡರಿ ಪರೀಕ್ಷೆ.

ದಿವಸ	ಕಾಲ.	ವಿಷಯಗಳು.	ಅಂಕಗಳು.
ನವೆಂಬರು 18ನೆ ತಾ|| ಸೋಮವಾರ.	10ರಿಂದ 12—30 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಇಂಗ್ಲಿಷ್ ವ್ಯಾಕರಣ ಮತ್ತು ಭಾಷಾಗ್ರಂಥ.	60
		ಸಂಸ್ಕೃತದ ಮತ್ತು ಫಾರಸಿಯ ವ್ಯಾಕರಣ ಮತ್ತು ಭಾಷಾ ಗ್ರಂಥಗಳು	65
	1—30ರಿಂದ 2—30ರ ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಭಾಷಾಂತರೀಕರಣ—ಇಂಗ್ಲಿಷ್, ಸಂಸ್ಕೃತ, ಫಾರಸಿ	
		ಇಂಗ್ಲಿಷ್ ಪ್ರಬಂಧರಚನೆ, ಇಂಗ್ಲೀಷನ್ನು ದೇಶಭಾಷೆಯಾಗಿ ಉಳ್ಳವರಿಗೆ	35
	2—35ರಿಂದ 3-5 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಉಕ್ತಲೇಖನ—ಇಂಗ್ಲೀಷ್	15
		ಸಂಸ್ಕೃತ ; ಫಾರಸಿ	10
	3—10ರಿಂದ 3—40 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಕೈಬರವಣಿಗೆ. ಇಂಗ್ಲೀಷ್ ; ಸಂಸ್ಕೃತ ; ಫಾರಸಿ	10
	3—45ರಿಂದ 4—15 ವರೆಗೆ	ಉರ್ದು ಉಕ್ತಲೇಖನ	10
	4—20ರಿಂದ 4—50 ವರೆಗೆ	ಉರ್ದು ಕೈಬರವಣಿಗೆ	10
ನವೆಂಬರು 19ನೆ ತಾ|| ಮಂಗಳವಾರ.	10ರಿಂದ 1ರ ವರೆಗೆ	ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆ—	
		ಕನ್ನಡ ವ್ಯಾಕರಣ, ಭಾಷಾಗ್ರಂಥ ಮತ್ತು ಪ್ರಬಂಧರಚನೆ ...	100
		ಫಾರಸಿ ದ್ವಿತೀಯ ಭಾಷೆ—	
		ಫಾರಸಿ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ...	100
	2ರಿಂದ 5ರ ವರೆಗೆ	ಸಂಸ್ಕೃತ ದ್ವಿತೀಯ ಭಾಷೆ—	
		ಸಂಸ್ಕೃತ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ...	100
		ಲಾಟಿನ್ ದ್ವಿತೀಯ ಭಾಷೆ—	
		ಲಾಟಿನ್ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ...	120
		ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—	
		ತೆಲುಗು, ಮತ್ತು ಉರ್ದು, ವ್ಯಾಕರಣ, ಭಾಷಾಗ್ರಂಥಗಳು ಮತ್ತು ಪ್ರಬಂಧರಚನೆ	100